ನಿವೃತ್ತಿ ಮಾರ್ಗಸೂಚಿಯನ್ವಯ ಸ್ವಯಂ ನಿವೃತ್ತಿಗೊಳಿಸಲು ಸರ್ಕಾರದಿಂದ ರೂ. 4,02,20,000ಗಳ ಅನುದಾನವನ್ನು ನಿಗಮಕ್ಕೆ ಸರ್ಕಾರವು ಬಿಡುಗಡೆ ಮಾಡದೆ. ಉಳಿದ ನೌಕರರಿಗೂ ಸಹ ಸ್ವಯಂ ನಿವೃತ್ತಿ ಯೋಜನೆ ಅಳವಡಿಸಲು ಪರಿಶೀಲಿಸಲಾಗುತ್ತಿದೆ. ಕನಕಪುರದಲ್ಲಿನ ರೇಷ್ಮೆ ನೂಲು ತೆಗೆಯುವ ಘಟಕದ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ ಅಳವಡಿಸಲು ಪರಿಶೀಲಿಸಲಾಗುತ್ತಿದೆ.

ಮೇಲ್ಕಾಣಿಸಿದಂತೆ ಎರಡು ಘಟಕಗಳಲ್ಲಿನ ನೌಕರರಿಗೆ ಸ್ವಯಂ ನಿವೃತ್ತಿಗೊಳಿಸಿದಲ್ಲಿ ನಿಗಮವು ಲಾಭದಾಯಕವಾಗಬಹುದಾಗಿದೆ.

ಮೈಸೂರು ನಗರದ ಸುತ್ತಮುತ್ತಲಿನ ಕೈಗಾರಿಕಾ ಅಭಿವೃದ್ಧಿಗಾಗಿ ಭೂಸ್ವಾಧೀನ

648(984) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಮೈಸೂರು ನಗರದಲ್ಲಿ ಸುತ್ತಮುತ್ತಲಿನ ಕೈಗಾರಿಕಾ ಅಭಿವೃದ್ಧಿಗಾಗಿ ಯಾವ ಯಾವ ರೈತರಿಂದ ಎಲ್ಲೆಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಈ ಸಂಬಂಧ ರೈತರಿಗೆ ಪರಿಹಾರ ರೂಪವಾಗಿ ಎಷ್ಟೆಷ್ಟು ಮೊತ್ತವನ್ನು ನೀಡಲಾಗಿದೆ?

ಇ) ಪರಿಹಾರ ನೀಡಬೇಕಾದ ಬಾಕಿ ಪ್ರಕರಣಗಳ ವಿವರ ನೀಡುವುದು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ನೀಡಿರುವ ಮಾಹಿತಿಗಳ ಪ್ರಕಾರ ಕಳೆದ 3ವರ್ಷಗಳಲ್ಲಿ ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಿರುವ ಭೂಮಿಗಳ ವಿಸ್ತೀರ್ಣ ಹಾಗೂ ರೈತರ ಹೆಸರುಗಳು ಈ ಕೆಳಕಂಡಂತಿದೆ:-

ಕ್ರ.ಸಂ.	ರೈತರ	ಗ್ರಾಮ	ಸ.ನಂ.	ವಿಸ್ತೀರ್ಣ
1.	ಲೇಟ್ ಕರಿಯಯ್ಯನ ಮೈನರ್ ಮಗ ನಂಜಂಡಯ್ಯ, ಇವರ ಮೈನರ್ ಗಾರ್ಡಿಯನ್ ಚಿಕ್ಕಪ್ಪ ಕೆ. ವಿಷಕಂಠಯ್ಯ	ಹೂಟಗಳ್ಳಿ	101ರ ಪೈಕಿ	0-38
2.	ಕಪನಯ್ಯ ಬಿನ್ ಪುಟ್ಟೇಗೌಡ ಮಾರಯ್ಯ, ಚಿನ್ನಮ್ಮ ಕೆ. ವಿಷಕಂಠಯ್ಯ ನಂಜುಂಡಯ್ಯ ಲೇಟ್ ಕರಿಯಯ್ಯ ಮೈನರ್ ಗಾರ್ಡಿಯನ್ ಮಗ ನಂಜುಂಡಯ್ಯ ಮೈನರ್ ಚಿಕ್ಕಪ್ಪ. ವಿಷಕಂಠಯ್ಯ.	ಹೂಟಗಳ್ಳಿ	102ರ ಪೈಕಿ	6-00

3.	ಕಪನಯ್ಯ ಬಿನ್ ಪುಟ್ಟೇಗೌಡ ಮಾಗಯ್ಯ, ಚಿನ್ನಮ್ಮ, ಕೆ. ವಿಷಕಂಠಯ್ಯ, ನಂಜುಂಡಯ್ಯ	ಹೂಟಗಳ್ಳಿ	103ರ ಪೈಕಿ	1-10
4.	ಎಂ.ಬಿ. ಚೇತನ್	ಕುರುಬರಹಳ್ಳಿ	4	2-20
5.	ಕುಳ್ಳೇಗೌಡ ಮತ್ತು ಮಾದೇಗೌಡ	ಹೆಬ್ಬಾಳ್	398ರ ಪೈಕಿ	2-20
6.	ಲಕ್ಷ್ಮ್ಮಮ್ಮ ಕೋಂ ಪೊದೇಗೌಡ ಉ: ಕರೀಗೌಡ	ಹೆಬ್ಬಾಳ್	406:1	2-17
7.	ನಿಂಗೇಗೌಡ ಮೈನರ್ ಗಾರ್ಡಿಯನ್ ತಾಯಿ ಚಿಕ್ಕತಾಯಮ್ಮ	ಹೆಬ್ಬಾಳ್	406:2 406:3	1-25 1-32
				19-02 ಎಕರೆಗಳು

	ರೈತರ ಹೆಸರು	ಗ್ರಾಮ	ಪರಿಹಾರದ ಮೊಬಲಗು
1.	ವಿಷಕಂಠಯ್ಯ ಬಿನ್ ಕಪನಯ್ಯ	ಹೂಟಗಳ್ಳಿ	10,58,902-00 ರೂ.
2.	ನಂಜುಂಡಯ್ಯ	ಹೂಟಗಳ್ಳಿ	2,59,5000-00 ರೂ.
3.	ಪುಟ್ಟಮ್ಮ ಕೋಂ ಜಯರಾಂ	ಹೂಟಗಳ್ಳಿ	1,65,000-00 ರೂ.
4.	ಯಶೋದಮ್ಮ ಕೋಂ ಕರೀಗೌಡ	ಹೂಟಗಳ್ಳಿ	2,74,689-00
5.	ಕೆ. ಮಹದೇವ್ ಬಿನ್ ಕಂಪನಯ್ಯ	ಹೂಟಗಳ್ಳಿ	2,93,783-00
6.	ಕುಳ್ಳೇಗೌಡ, ಮಾದೇಗೌಡ ಬಿನ್ ಕೃಷ್ಣೇಗೌಡ	ಹೆಬ್ಬಾಳ್	5,00,000-00
7.	ಲಕ್ಷ್ಮ್ಮಮ್ಮ ಕೋಂ ಮಾದೇಗೌಡ	ಹೆಬ್ಬಾಳ್	6,97,500-00
8.	ಲಿಂಗೇಗೌಡ ಬಿನ್ ಚಿಕ್ಕತಾಯಮ್ಮ	ಹೆಬ್ಬಾಳ್	9,90,000-00
9.	ಎಂ.ಬಿ. ಚೇತನ್ ಬಿನ್ ಬೋರಯ್ಯ		7,50,000-00

ಶ್ರೀ ಮಾದಯ್ಯ ಎಂಬುವವರಿಗೆ ಹೂಟಗಳ್ಳಿ ಗ್ರಾಮದ ಸರ್ವೇ ನಂ. 102 ರಲ್ಲಿನ 0-32 ಗುಂಟೆ ಮತ್ತು ಸ.ನಂ. 103ರಲ್ಲಿನ 0-05 ಗುಂಟೆ ಜಮೀನಿಗೆ ಪರಿಹಾರ ಹಣ ನೀಡಬೇಕಾಗಿರುತ್ತೆ.

ರಾಜ್ಯದಲ್ಲಿ ರೇಷ್ಮೆ ಗೂಡಿಗೆ ಬೆಂಬಲ ಬೆಲೆ ನಿಗದಿಪಡಿಸುವುದು

649(1000) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?